## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

**S.C.103/2017**
**S.C.53/2019**

ದಿಃ 25.11.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-9 Pw-10

| | | |
|---|---|---|
| ಹೆಸರು | ಃ | ಶ್ರೀಧರ್ |
| ತಂದೆಯ ಹೆಸರು | ಃ | ಸುರೇಶ್ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಎಲೆಕ್ಟ್ರೀಷಿಯನ್ |
| ವಾಸಸ್ಥಳ | ಃ | ಬ್ಯಾಡರಹಳ್ಳಿ, ಬೆಂಗಳೂರುಸ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿದಾರರು ನಿ.ಪಿ.12 ಮಹಜರ್‌ನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು. ಈ ಸಹಿಗಳನ್ನು ಸುಮಾರು ವರ್ಷಗಳ ಹಿಂದೆ ನಾನು ತಾವರೆಕೆರೆ ಠಾಣೆಗೆ ಹೋಗಿದ್ದಾಗ ಮಾಡಿದ್ದೆ. ಆ ಸಮಯದಲ್ಲಿ ನಾನು ಮೃತ ನವೀನ್ ಕುಮಾರನನ್ನು ನೋಡಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಲಿಲ್ಲ. ನಿ.ಪಿ.12ರಲ್ಲಿರುವ ವಿಷಯಗಳು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ದಿಃ12.10.2016 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 2.30 ಗಂಟೆವರೆಗೆ ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ನವೀನ್ ಕುಮಾರನ ಶವ ಇದ್ದು, ಅದನ್ನು ನನ್ನ ಮತ್ತು ಪಂಚರ ಹಾಗೂ ಆತನ ಸಂಬಂಧಿಗಳ ಸಮಕ್ಷಮ ಪೊಲೀಸರು ಪರಿಶೀಲಿಸಿ ನಮ್ಮ ಸಮಕ್ಷಮ ನಿ.ಪಿ.12 ರಲ್ಲಿರುವ ಗಾಯಗಳನ್ನು ನಾವು ಹೇಳಿದಂತೆ ನಮೂದಿಸಿ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿಯೇ ನಮ್ಮ ಸಹಿಗಳನ್ನು ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ಟಿ.ಜಿ., ಮತ್ತು ಎಸ್.ಹೆಚ್.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.